ನಾನು ನಾನಾಗಿಯೇ ಇರುತ್ತೇನೆ. ಬೇರೊಬ್ಬರನ್ನು ಅನುಕರಿಸುವ ಉಸಾಬರಿಯೇ ಬೇಡ' ಅಂತ ಕಾಗೆ ತಾನು ಅಂಟಿಸಿಕೊಂಡ ಪುಕ್ಕ, ಜುಟ್ಟು ಎಲ್ಲವನ್ನೂ ಕಿತ್ತುಹಾಕಿತು. ಭ್ರಮೆ ಅನ್ನೋದು ಎಂತೆಂತಹ ಹುಚ್ಚಾಟಗಳನ್ನು ಮಾಡಿಸುತ್ತದೆ ಅಲ್ವಾ?

ಬಾಲ್ಯದಲ್ಲಿ ಹನುಮಂತನ ಬಾಲದಂತೆ ಬೆಳೆಯುವ ಪದ್ಯಗಳನ್ನು ನಾವು ಹೇಳುತ್ತಿದ್ದೆವು – 'ಅಚ್ಚಚ್ಚು ಬೆಲ್ಲದಚ್ಚು/ ಅಲ್ಲಿ ನೋಡು ಇಲ್ಲಿ ನೋಡು / ಸಂಪಿಗೆ ಮರದಲ್ಲಿ ಗುಂಪು ನೋಡು / ಯಾವ ಗುಂಪು? / ಕಾಗೆ ಗುಂಪು / ಯಾವ ಕಾಗೆ? / ಕಪ್ಪು ಕಾಗೆ / ಯಾವ ಕಪ್ಪು? / ಮಡಕೆ ಕಪ್ಪು / ಯಾವ ಮಡಕೆ? / ಅನ್ನದ ಮಡಕೆ / ಯಾವ ಅನ್ನ? / ತಿನ್ನೋ ಅನ್ನ / ಯಾವ ತಿನ್ನು? / ಏಟು ತಿನ್ನು' ಎಂದೆನ್ನುತ್ತಾ ಒಬ್ಬರಿಗೊಬ್ಬರು ಸುಳ್ಳುಸುಳ್ಳೇ ಹೊಡೆದುಕೊಳ್ಳುತ್ತಿದ್ದೆವು. ಬೆಳ್ಳಕ್ಕಿಯ ದೇಹದಲ್ಲಿ ಒಂದೂ ಕಪ್ಪು ಕಲೆ ಕಾಣದಂತೆ, ಕಾಗೆಯ ಮೈಯಲ್ಲಿ ಒಂದೂ ಬಿಳಿ ಕಲೆ ಕಾಣದು. ಅಪವಾದವೆಂಬಂತೆ, ವರ್ಣ ರೂಪಾಂತರದಿಂದ ಬಿಳಿಕಾಗೆ, ಬೂದು ಬಣ್ಣದ ಕಾಗೆಗಳು ಪ್ರಪಂಚದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಭಾರತದಲ್ಲಿ ಕಾಗೆಯ ಜಾತಿಗೆ ಸೇರಿದ ವಿವಿಧ ಬಣ್ಣಗಳ ಸುಂದರವಾದ ಹತ್ತು ಬಗೆಯ ಕಾಗೆಗಳು ಕಂಡುಬಂದಿವೆಯಂತೆ!

ನಮ್ಮ ಮನೆಗೆ ಅನತಿ ದೂರದಲ್ಲಿ ಜೀವಶಾಸ್ತ್ರ ಪ್ರಾಧ್ಯಾಪಕರೊಬ್ಬರಿದ್ದರು. ಅವರಲ್ಲಿ ಕಾಗೆಯ ಬಗ್ಗೆ ವಿವರಣೆ ಕೇಳಿದಾಗ ಎತ್ತುಚ್ಚೆ ಹೊಯ್ದಂತೆ ಒಂದೇ ಸಮನೆ ಅದರ ಬಗ್ಗೆ ಹೇಳತೊಡಗಿದರು: 'ಕಾಗೆ ಊರಿನ ಪರಿಸರವನ್ನು ಶುಚಿಯಾಗಿಡುವುದರಲ್ಲಿ ಸಹಕಾರಿ. ಕಾಗೆಯ ಬಗ್ಗೆ ಕೆಲವು ಕುತೂಹಲಕಾರಿ ವಿಶೇಷಗಳಿವೆ. ಅದು ಸಸ್ಯಾಹಾರಿಯೂ ಹೌದು, ಮಾಂಸಾಹಾರಿಯೂ ಹೌದು. ವೈಜ್ಞಾನಿಕವಾಗಿ ಕಾಗೆಯು ಕೋರ್ವಿಡೇ (Corvidae) ಕುಟುಂಬಕ್ಕೆ ಸೇರಿದೆ. ಸುಮಾರು 10ರಿಂದ 15 ವರ್ಷಗಳವರೆಗೆ ಕಾಗೆಗಳು ಬದುಕುತ್ತವೆ. ಸಂವಹನ ನಡೆಸಲು ಅವು ಕೂಗುವ ಶಬ್ದಗಳು ವಿವಿಧ ಸನ್ನಿವೇಶಕ್ಕನುಗುಣವಾಗಿರುತ್ತವೆ. ಅವು ಸಮತೋಲನವುಳ್ಳ ಆಹಾರವನ್ನು ಸೇವಿಸುತ್ತವಂತೆ! ಒಂದು ವೇಳೆ ತಮಗೆ ಬೇಕಾದ ಆಹಾರ ದೊರೆಯದಿದ್ದರೆ ಬೇರೆ ಪ್ರಾಣಿಯ ಮೇಲೆರಗಿ ಆ ಆಹಾರವನ್ನು ಪಡೆಯುತ್ತವಂತೆ! ತಮ್ಮ ಗುಂಪಿನ ಸದಸ್ಯನ ಬಗ್ಗೆ ಕಾಳಜಿ ವಹಿಸುವ ಇವು ಯಾವುದೇ ಕಾಗೆ ಗಾಯಗೊಂಡಿದ್ದರೆ, ಹಾರಲು ಅಶಕ್ತವಾಗಿದ್ದರೆ ಅದಕ್ಕೆ ಆಹಾರವನ್ನು ಹಾಗೂ ಆಶ್ರಯವನ್ನು ನೀಡಿ ಕಾಪಾಡುತ್ತವೆ. ಅಂತೆಯೇ ಸ್ವಲ್ಪ ದೊಡ್ಡ ಕಾಗೆ (ಅಣ್ಣ/ಅಕ್ಕ) ತನಗಿಂತ ಚಿಕ್ಕ ಕಾಗೆ (ತಮ್ಮ/ತಂಗಿ) ಯನ್ನು ನೋಡಿಕೊಳ್ಳಲು ತಂದೆ ತಾಯಿಗೆ ಸಹಾಯ ಮಾಡುತ್ತದೆ. ಬಳಗದಲ್ಲಿ ಕಾಗೆಯೊಂದು ಸತ್ತರೆ ಅದರ ನೆರೆಗೂಡುಗಳ ಕಾಗೆಗಳು ಅಂತ್ಯಕ್ರಿಯೆಯಲ್ಲಿ ಭಾಗಿಯಾಗುತ್ತವೆ! ಅವು ಸತ್ತಿರುವ ಕಾಗೆಯನ್ನು ಮುಟ್ಟುವುದಿಲ್ಲ. ಅದರ ಬದಲು ಅದು ಸತ್ತಿರುವ ಪರಿಸರವನ್ನು ಸೂಕ್ಷ್ಮವಾಗಿ ಗಮನಿಸುತ್ತವೆ. ಅಂತಹ ಜಾಗದಲ್ಲಿ ಬೇಕಾದಷ್ಟು ಆಹಾರವಿದ್ದರೂ ಅದನ್ನು ತಿನ್ನುವುದಿಲ್ಲ. ಕೆಲವೊಮ್ಮೆ ಅಂತಹ ಸಂದರ್ಭದಲ್ಲಿ ತಮ್ಮ ಶತ್ರುವನ್ನು ಬೆನ್ನಟ್ಟಿ ಹೋಗುವುದೂ ಉಂಟು. ಸಂವಹನದಲ್ಲಿ ಹಾಗೂ ಪರಸ್ಪರ ಕಲಿಯುವುದರಲ್ಲಿ ಅವು ಭಾರೀ ಹುಷಾರು. ಕಾಗೆಗಳು ತಮ್ಮೊಳಗೆ ವಿಶೇಷ ಸಂದೇಶಗಳನ್ನು ರವಾನಿಸಿಕೊಳ್ಳುತ್ತವೆ. ಒಂದು ವೇಳೆ ಕಾಗೆಯೊಂದು ತನ್ನ ಗುಂಪನ್ನು ಬಿಟ್ಟು ಬೇರೆ ಗುಂಪನ್ನು ಸೇರಿದರೆ ಅದು ಆ ಹೊಸ ಗುಂಪಿನ ಭಾಷೆಯನ್ನು ಅಣಕ ಮಾಡುವ ಮೂಲಕ ಕಲಿಯುತ್ತದೆ!' ಇಷ್ಟೆಲ್ಲಾ ಹೇಳಿದ ಆ ಪ್ರಾಧ್ಯಾಪಕರನ್ನು ಕಾಕಶಾಸ್ತ್ರ ಪ್ರವೀಣರೆಂದೇ ನಾನು ನಂಬಿದ್ದೇನೆ.



ಕಾಗೆಗಳು ಒಳ್ಳೆಯ ಜ್ಞಾಪಕಶಕ್ತಿ ಇರುವ ಹಕ್ಕಿಗಳು. ಕಾಗೆಗೇನಾದರೂ ಸುಳ್ಳು ಸುಳ್ಳೇ ಆಹಾರ ನೀಡಿದರೆ ಅಥವಾ ಹಿಂಸಿಸಿದರೆ ಜನ್ಮಪರ್ಯಂತ ಅವರನ್ನು ಮರೆಯುವುದಿಲ್ಲ! ಮುಂದೆ ಅವರನ್ನು ಕಂಡಾಗ ಅದು ಹಿಂಸಾತ್ಮಕವಾಗಿ ವರ್ತಿಸಬಹುದು. ಕೆಲವು ವರ್ಷಗಳ ಹಿಂದೆ ಪತ್ರಿಕೆಯೊಂದರಲ್ಲಿ ಬಂದ ವರದಿಯಂತೆ, ಕಾಗೆಯೊಂದು ವೃದ್ಧರೊಬ್ಬರನ್ನು ಕಂಡೊಡನೆ ಅವರ ಮೇಲೆ ದಾಳಿ ಮಾಡುತ್ತಿತ್ತಂತೆ!